ಸಿಟ್ಟಿಗೆದ್ದ ಮೆರವಣಿಗೆಯಲ್ಲಿದ್ದ ಕೆಲವು ಯುವಕರು ಡಾ : ಆಸ್ಪಕ್ ಬ್ರಹ್ಮಾವರ್ ಇವರ ಮನೆಯ ಮೇಲೆ ಕಲ್ಲು ತೂರಿದರು ಮತ್ತು ಗ್ಲಾಸುಗಳನ್ನು ಒಡೆದರು. ಅಲ್ಲದೆ ಮುಂದೆ ಅವರು ಬಸ್ತಿ ಮಸೀದಿಯ ಹತ್ತಿರ ನಿಲ್ಲಿಸಿರುವ ಕಾರುಗಳಿಗೂ ಕಲ್ಲು ತೂರಿ ಜಖಂಗೊಳಿಸಿದರು ಹಾಗೂ ಮಸೀದಿಗೂ ಕಲ್ಲು ತೂರಿದರು. ನಂತರ ಇರಿಯುವುದು, ಲೂಟಿ, ಬೆಂಕಿ ಹಚ್ಚುವಿಕೆ, ಇತ್ಯಾದಿ ಕಾನೂನು ಬಾಹಿರ ಚಟುವಟಿಕೆಗಳು ಪ್ರಾರಂಭವಾದವು.

ಅದೇ ದಿವಸ 1100 ಘಂಟೆಗೆ ರಾತ್ರಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸೊಂದಕ್ಕೆ ಕಲ್ಲು ತೂರಿ ಜಖಂಗೊಳಿಸಿದರು. 11-45 ಘಂಟೆಯ ಸುಮಾರಿಗೆ ಸಕ್ರಪ್ಪ ಎಂಬುವವನಿಗೆ ಆಟೋದಲ್ಲಿ ಮನೆಗೆ ಹೋಗುತ್ತಿರುವ ಅಬ್ಬರಿ ಎಂಬಲ್ಲಿ ಆಟೋವನ್ನು ನಿಲ್ಲಿಸಿ ಚೂರಿಯಿಂದ ತಿವಿದು ಗಾಯಗೊಳಿಸಿರುತ್ತಾರೆ. ಅದೇ ಸಮಯಕ್ಕೆ ಕೆಲವು ಜನರು ಗುಂಪು ಕೂಡಿಕೊಂಡು ಮಾರಕ ಅಸ್ತ್ರಗಳನ್ನು ಹಿಡಿದು ಒಬ್ಬ ಹಿಂದೂವಿನ ಮನೆಯ ಮೇಲೆ ಕಲ್ಲು ತೂರಿ, ಭತ್ತದ ಗುಡಾಣಕ್ಕೆ ಬೆಂಕಿ ಹಚ್ಚಿ ಒಬ್ಬನಿಗೆ ಚಾಕುವಿನಿಂದ ಗಾಯಗೊಳಿಸಿರುತ್ತಾರೆ.

ಅದೇ ಸಮಯದಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ : 17ರಲ್ಲಿ ನಾಗಪ್ಪ ಗೋವಿಂದ ಮೊಗೇರ್ ಎಂಬುವನಿಗೆ ಕಬ್ಬಿಣದ ಸಲಾಕೆಯಿಂದ ಹೊಡೆದು ಗಾಯಗೊಳಿಸಿರುತ್ತಾರೆ. ಅಲ್ಲದೆ ಮಧ್ಯ ರಾತ್ರಿ ಸಮಯದಲ್ಲಿ ಮಹ್ಮದ ಸಾದಿಕ ಆಲಿ ಸಾಹೇಬ್ ಎಂಬುವನು ತನ್ನ ಆಟೋದಲ್ಲಿ ಪುಷ್ಪಾಂಜಲಿ ಥಿಯೇಟರಿಗೆ ಹೋಗುವಾಗ ಕೆಲವು ಗಲಭೆಕೋರರು ಸದರಿ ಆಟೋವನ್ನು ಭಟ್ಕಳ್‌ನ ಎಸ್.ಬಿ.ಐ. ಹತ್ತಿರ ನಿಲ್ಲಿಸಿ ಜಖಂಗೊಳಿಸಿದರು. ದಿನಾಂಕ : 1.4.1993ರಂದು ರಾತ್ರಿ 11.00 ಘಂಟೆಯ ಸಮಯದಲ್ಲಿ ನಡಾಫಾ ಕೂಲ್ ಡ್ರಿಂಕ್ಸ್ ಅಂಗಡಿಯ ಹತ್ತಿರ 10-15 ಜನರ ಗುಂಪೊಂದು ಸುನಿಲ್ ಮತ್ತು ಅವರ ಸಹೋದರನ ಮೇಲೆ ಹಲ್ಲೆ ನಡೆಸಿದರು. ರಾತ್ರಿ 11-00 ಘಂಟೆಯ ಸಮಯದಲ್ಲಿ ಗುಂಪೊಂದು ಶ್ರೀ ನಾಗೇಶ್ ಧಂಗಯ್ಯ ನಾಯಕ್, ಚೌತಾನಿ ಎಂಬುವರ ಮನೆಗೆ ಮುತ್ತಿಗೆ ಹಾಕಿ ಕಿಟಕಿ ಗ್ಲಾಸುಗಳನ್ನು ಒಡೆದು ಹನ್ನೆರಡು ಸಾವಿರ ರೂಪಾಯಿಯಷ್ಟು ನಷ್ಟ ಉಂಟು ಮಾಡಿರುತ್ತಾರೆ. ದಿನಾಂಕ : 2-4-1 993ರಂದು ರಾತ್ರಿ 1.15 ಘಂಟೆಯ ಸುಮಾರಿಗೆ ನಾಗರಾಜ ಮಂಗಪ್ಪ ನಾಯ್ಕ ಎಂಬುವನು ಸಿನಿಮಾ ನೋಡಿ ಮನೆಗೆ ಬರುವಾಗ ಕೆಲವರು ಗುಂಪುಮಾಡಿ ಕತ್ತಿ ಮತ್ತು ಚಾಕುವಿನಿಂದ ಇರಿದು ಗಾಯಗೊಳಿಸಿರುತ್ತಾರೆ. ಅದೇ ಸಮಯದಲ್ಲಿ ಮಂಡಳ್ಳಿ ಎಂಬಲ್ಲಿ ಕುಪ್ಪಮೊಗೇರ ಎಂಬುವನು ತನ್ನ ಸಂಗಡಿಗರೊಂದಿಗೆ ಮೀನು ಹಿಡಿಯಲು ಹೋದಾಗ ಕೆಲವರು ಗುಂಪು ಕೂಡಿಕೊಂಡು ಹಲ್ಲೆ ನಡೆಸಿ ಗಾಯಗೊಳಿಸಿರುತ್ತಾರೆ. 2.30ರ ಸಮಯದಲ್ಲಿ ಹೆಚ್. ಬಿ. ಕಾಲೋನಿಯ ಶ್ರೀ ಎ. ಜಿ. ಶಾಸ್ತ್ರಿ ಎಂಬುವರ ಮೋಟಾರು ಸೈಕಲ್ ಸ್ಕ್ಯಾಂಡನ್ನು ಕೆಲವು ದುಷ್ಕರ್ಮಿಗಳು ನಾಶಪಡಿಸಿ ಒಂದು ಸಾವಿರ ರೂಪಾಯಿಯಷ್ಟು ನಷ್ಟ ಉಂಟುಮಾಡಿರುತ್ತಾರೆ. 00-3000ರ ಸಮಯದಲ್ಲಿ ಶ್ರೀ ಹರೀಶ್ ರಾಮದಾಸ್ ಶೇಟ್ ಕಿದ್ವಾಯ ಲೋಡ್ ಇವರ ಆಟೋರಿಕ್ಷಾಗೆ ಬೆಂಕಿ ಹಚ್ಚಿ 30 ಸಾವಿರ ರೂಪಾಯಿ ನಷ್ಟ ಉಂಟು ಮಾಡಿದ್ದಾರೆ. ಅದೇ ಸಮಯದಲ್ಲಿ ಶ್ರೀ ಸಂದೀಪ್ ಗಣೇಶ್ ಶೇಟ್, ಕಿದ್ವಾಯಿ ರೋಡ್ ಇವರ ಮನೆ ಹತ್ತಿರ ಇರುವ ಟೆಲಿಫೋನ್ ಬೂತ್‌ಗೆ ಬೆಂಕಿ ಹಚ್ಚಿ ಐದು ಸಾವಿರ ರೂಪಾಯಿ ನಷ್ಟ ಉಂಟು ಮಾಡಿದ್ದಾರೆ.

ದಿನಾಂಕ : 2.4.1993ರಂದು ರಾತ್ರಿ 9-00 ಘಂಟೆ ಸಮಯದಲ್ಲಿ ಕೆಲವು ದುಷ್ಕರ್ಮಿಗಳು ಸಾಸ್ತಾರ್ ಗ್ರಾಮದಲ್ಲಿ ಒಂದು ಮಸೀದಿಗೆ ಹಾನಿ ಉಂಟು ಮಾಡಿರುತ್ತಾರೆ. ಅದೇ ದಿನ ರಾತ್ರಿ 9.30 ರ ಸುಮಾರಿಗೆ ಎರಡು ಮನೆಗೆ ಬೆಂಕಿ ಹಚ್ಚಲಾಯಿತು. ಈ ಸಂಬಂಧದಲ್ಲಿ ಸಂಶಯಾಸ್ಪದ ಹನ್ನೆರಡು ಜನರ ಪೈಕಿ ಒಬ್ಬನನ್ನು ಗುರುತಿಸಿ ದಸ್ತಗಿರಿ ಮಾಡಲಾಗಿದೆ. ಅದೇ ದಿನ ಬೆಳ್ಳಿ ಗ್ರಾಮದಲ್ಲಿ ಕೆಲವು ಜನ ದುಷ್ಕರ್ಮಿಗಳು ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ದಂಪತಿಗಳಿಬ್ಬರನ್ನು ಹೊಡೆದು ಗಾಯಗೊಳಿಸಿದರು.

ದಿನಾಂಕ : 6 ಮತ್ತು 7ರಂದು ಒಂದೆರಡು ಹಿಂಸಾತ್ಮಕ ಘಟನೆಗಳು ನಡೆದವು. ಆದರೆ ಒಟ್ಟಾರೆ ಪರಿಸ್ಥಿತಿ ಶಾಂತವಾಗಿದ್ದು ಹತೋಟಿಯಲ್ಲಿದೆ.

ಈ ಗಲಭೆಗಳಲ್ಲಿ ಒಟ್ಟು 51 ಪ್ರಕರಣಗಳನ್ನು ದಾಖಲೆ ಮಾಡಿಕೊಳ್ಳಲಾಗಿದೆ. 33 ಜನರನ್ನು ಬಂಧಿಸಲಾಗಿದೆ. ಈ ಗಲಭೆಗಳಲ್ಲಿ 17ರ ಜನರಿಗೆ ಗಾಯಗಳಾಗಿದ್ದು ಅದರಲ್ಲಿ 8 ಜನ ಹಿಂದೂಗಳು, 4 ಜನ ಅಲ್ಪಸಂಖ್ಯಾತರು ಹಾಗೂ 5 ಜನ ಪೋಲೀಸ್ ಸಿಬ್ಬಂಧಿಗಳು ಇದ್ದಾರೆ. 8 ಮನೆಗಳು 6 ವಾಹನಗಳು 4 ಅಂಗಡಿಗಳು ಹಾಗೂ ಎರಡು ಪೊಂಪ್ ಸೆಟ್‌ಗಳು ಹಾನಿಗೊಳಗಾಗಿವೆ. ಒಂದು ಹುಲ್ಲಿನ ಬಣವೆಯನ್ನು ಸುಡಲಾಗಿದ್ದು, ಒಂದು ಅಕ್ಕಿ ಗಿರಣಿಗೆ ಸ್ವಲ್ಪ ಹಾನಿ ಉಂಟಾಗಿದೆ.

ಶ್ರೀ ಬೇಬಿ ಇಬ್ರಾಹಿಂ ಎಂಬ ವ್ಯಕ್ತಿಗೆ ಸೇರಿದ 4 ಟ್ರಾಕ್ಟರ್‌ಗಳು, 2 ಕ್ರೈಶರ್‌ಗಳು ಹಾಗೂ ಒಂದು ಕಂಪ್ರೆಸರ್ ಇವುಗಳಿಗೆ ದಿನಾಂಕ : 6-4-1993ರಂದು ಹಾನಿ ಉಂಟುಮಾಡಲಾಗಿದ್ದು ಈ ಘಟನೆ ಭಟ್ಕಳಿನಿಂದ 30 ಕಿಲೋಮಿಟರ್ ದೂರದಲ್ಲಿರುವ ಬಂಗಾರ ಮಡು ಎಂಬ ಸ್ಥಳದಲ್ಲಾಗಿದೆ. ಈ ಘಟನೆಯಲ್ಲಿ 14 ಲಕ್ಷ ರೂಪಾಯಿ ಹಾನಿಯಾಗಿರಬಹುದೆಂದು ಅಂದಾಜು ಮಾಡಲಾಗಿದೆ. ಶ್ರೀ ನಿತ್ಯಾನಂದ ಪೈ ಎಂಬ ವ್ಯಕ್ತಿಗೆ ಸೇರಿದ ಭಟ್ಕಳ್ ನಗರದಲ್ಲಿರುವ ಬಟ್ಟೆ ಅಂಗಡಿಗೆ ವಿಶೇಷ ಹಾನಿ ಉಂಟಾಗಿದೆ.

ಉತ್ತರ ಕನ್ನಡ ಜಿಲ್ಲಾಧಿಕಾರಿಗಳು ಗಾಯಗೊಂಡವರಿಗೆ ಪರಿಹಾರ ನೀಡಿದ್ದಾರೆ ಅಲ್ಲದೆ ಆಸ್ತಿ ಹಾನಿಯಾದವರಿಗೂ ಕೂಡ ಪರಿಹಾರ ನೀಡಲಾಗುತ್ತಿದೆ. ದಿನಾಂಕ : 7-4-1993ರವರೆಗೆ ರೂ. 83750-00 ಪರಿಹಾರ ನೀಡಲಾಗಿದ್ದಿತು.

ಗಲಭೆ ನಿಯಂತ್ರಿಸಲು ಭಟ್ಕಳ್ ನಗರದಲ್ಲಿ 144 ಕಲಂನ ಮೇರೆಗೆ ನಿರ್ಬಂಧಕ ಆದೇಶವನ್ನು ಜಾರಿಗೊಳಿಸಲಾಗಿದ್ದಿತು. ಹೆಚ್ಚಿನ ಪೋಲೀಸ್ ಸಿಬ್ಬಂದಿ ಕಳುಹಿಸಲಾಗಿದೆ. ಪಶ್ಚಿಮ ಭಾಗದ ಡಿ.ಐ.ಜಿ. ಹಾಗೂ ಅವರ ಪೋಲೀಸ್ ಮಹಾನಿರ್ದೇಶಕರು (ಕಾನೂನು ಮತ್ತು ಸುವ್ಯವಸ್ಥೆ) ಭಟ್ಕಳ್ ನಗರಕ್ಕೆ ಭೇಟಿ ನೀಡಿದ್ದಾರೆ. ಅಲ್ಲದೆ ವಯಸ್ಕರ ಶಿಕ್ಷಣ ಖಾತೆಯ ಸಚಿವರಾದ ಶ್ರೀ ರಾಣೆಯವರು, ಲೋಕಾಸಭಾ ಸದಸ್ಯರು ಹಾಗೂ ಇತರ ಗಣ್ಯರು ಭಟ್ಕಳ್ ನಗರಕ್ಕೆ ಭೇಟಿ ನೀಡಿದ್ದಾರೆ. ಈಗ ಭಟ್ಕಳದಲ್ಲಿ ಪರಿಸ್ಥಿತಿ ಸಂಪೂರ್ಣ ಹತೋಟಿಯಲ್ಲಿದೆ ಮತ್ತು ಶಾಂತಿಯಲ್ಲಿದೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ನಾನು ಪ್ರತಿಸಾರಿ ಏನು ಹೇಳುತ್ತಾ ಬಂದಿದ್ದೇನೆ; ಅದೇ ರೀತಿ ಮಾನ್ಯ ಮುಖ್ಯಮಂತ್ರಿಗಳು ಇಲಾಖೆಯವರು ಕೊಟ್ಟ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಆದರೆ ಭಟ್ಕಳದಲ್ಲಿ ಶಾಂತ ಪರಿಸ್ಥಿತಿ ಇಲ್ಲ. ಇನ್ನೂ ಗಲಭೆಗಳು ನಡೆಯುತ್ತಿದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಅಲ್ಲಿ ಕೆಲವು ಘಟನೆಗಳು ಆಗಿವೆ ಎಂದು ಹೇಳಿದ್ದಾರೆ. ಆದರೆ ನಿನ್ನೆ ಒಂದು ಬಟ್ಟೆ ಅಂಗಡಿಯನ್ನು ಸುಟ್ಟಿದ್ದಾರೆ. ನಾನು ಈಗ 4-5 ಗಂಟೆ ಮೊದಲು ಕಾಂಟಾಕ್ಟ್ ಮಾಡಿದ್ದೆ. ಈಗ ತಾವು ತಮ್ಮ ಪೋಲೀಸ್ ಡಿಪಾರ್ಟ್‌ಮೆಂಟ್‌ನಿಂದ ತರಿಸಿದಂತ ಸ್ಟೇಟ್‌ಮೆಂಟ್ ಓದಿದ್ದೀರಿ. ಆದರೆ ನಿಜವಾಗಿ ಪರಿಸ್ಥಿತಿ ಏನಾಗಿದೆಯೆಂದರೆ ಇವತ್ತು ಅಲ್ಲಿ ಪೋಲೀಸರಿಗೆ ಫ್ರೀಡಂ ಇಲ್ಲ. ಯಾರಿಗೆ ಅರೆಸ್ಟ್ ಮಾಡಿದ್ದೀರೋ ಅವರನ್ನೂ ರಿಲೀಸ್ ಮಾಡಿದ್ದಾರೆ. ನಾನು ಒಂದು ಮಾತನ್ನು ನಿಮಗೆ ಹೇಳಿದೆ. ಏನೆಂದರೆ ನಮ್ಮ ಜಿಲ್ಲೆ ಇಡೀ ದೇಶಕ್ಕೆ ಒಂದು ಮಾದರಿ ಜಿಲ್ಲೆಯಾಗಿತ್ತು. ಮೊನ್ನೆ ಆದಂತಹ ಈ ಅಯೋಧ್ಯ ಘಟನೆಯ ಸಂದರ್ಭದಲ್ಲಿ ಕೂಡ ಒಂದು ಘಟನೆ ಸಹ ನಮ್ಮಲ್ಲಿನಡೆಯದೆ ದೇಶಕ್ಕೇ ಮಾದರಿಯಾಗಿತ್ತು. ಇಲ್ಲಿ ನಾನು ರಾಜಕೀಯ ಬಳಸುವುದಕ್ಕೆ ಹೋಗುವುದಿಲ್ಲ. ನನ್ನ ಇಂಟೆನ್‌ಷನ್ ಏನು ಇದೆ ಎಂದರೆ ಪೀಸ್ ರೆಸ್ಟೋರ್ ಆಗಬೇಕು. ಕಮ್ಯೂನಲ್ ಹಾರ್‌ಮನಿ ಇರಬೇಕು. ಹಾಗಾಗಿ ನಾನು ನಿಮಗೆ ಏನು ಹೇಳುತ್ತಿದ್ದೇನೆಂದರೆ ಪೋಲೀಸ್‌ಗೆ ಫ್ರೀ ಹ್ಯಾಂಡ್ ಕೊಡಿ. ಅಲ್ಲಿರುವ ಪೋಲಿಸರಿಗೆ ಫ್ರೀ ಹ್ಯಾಂಡ್ ಇಲ್ಲ. ನಿಮ್ಮ ಕಡೆಯಿಂದ ಇನ್‌ಸ್ಟ್ರಕ್ಷನ್ ಹೋಗುತ್ತೆ, ಯಾರನ್ನು ಮಾಡಬೇಕು. ಯಾರನ್ನು ರಿಲೀಸ್ ಮಾಡಬೇಕು ಎಂದು; ಹಾಗಾಗಿ ಜನರಲ್ಲಿ ವಿಶ್ವಾಸ ಬರುತ್ತಾ ಇಲ್ಲ. ಇದರ ಸಲುವಾಗಿ ಪೋಲೀಸರಿಗೆ ಫ್ರೀ ಹ್ಯಾಂಡ್‌ಕೊಡುವ ವ್ಯವಸ್ಥೆ ಆಗಬೇಕು. ಎರಡನೆಯದಾಗಿ ನಿನ್ನೆ ತಮಗೆ ಹೇಳಿದೆ, ಪೈ ಅಂಗಡಿ ಲೂಟಿಯಾಗಿದೆ ಮತ್ತು ಬೆಂಕಿ ಹಾಕಿದ್ದಾರೆ ಎಂದು; ಇದು 1ನೇ ತಾರೀಖಿನಿಂದ ಶುರುವಾಗಿದೆ. ಇದು 1ನೇ ತಾರೀಖಿನಿಂದ 7ನೇ ತಾರೀಖಿನವರೆಗೂ ನಡೆಯುತ್ತಿರುವುದನ್ನು ನೋಡಿದರೆ ಇದನ್ನು ಕಂಟ್ರೋಲ್ ಮಾಡುವುದರಲ್ಲಿ ಪೋಲೀಸರು ಫೇಲ್ ಆಗಿದ್ದನ್ನು ಒಪ್ಪಿಕೊಳ್ಳಬಹುದು. ಇಬ್ರಾಹಿಂ ಎನ್ನುವವರ ಸ್ಕೂಟರ್, ಟ್ರಾಕ್ಟರ್ ಮತ್ತು ಕ್ರಷರ್ ಅನ್ನು ಡ್ಯಾಮೇಜ್ ಮಾಡಿದ್ದಾರೆ. ಹಾಗೂ ಬೆಂಕಿ ಹಾಕಿದ್ದಾರೆ. ಇದು ನಿನ್ನೆ ಮೊನ್ನೆಯಾಗಿದೆ. ಆದುದರಿಂದ ಇದರ ಬಗ್ಗೆ ಈಗ ಏನು ಹೇಳಬೇಕು? ಪೋಲೀಸ್ ಹ್ಯಾವ್ ಫೇಲ್ಡ್ ಎಂದು ಹೇಳಬೇಕಾಗುತ್ತದೆ ಪೋಲೀಸರುಏಕೆ ಫೇಲ್ ಆದರೆಂದರೆ ಅವರಲ್ಲಿ ಬಹಳ ದಕ್ಷ ಅಧಿಕಾರಿಗಳು ಇದ್ದಾರೆ. ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಆದರೆ ಅಲ್ಲಿ ಅವರಿಗೆ ಕ್ಲಿಯರ್ ಇನ್‌ಸ್ಟ್ರಕ್ಷನ್ಸ್ ಇಲ್ಲ. ಇದು ಹಸ್ತಕ್ಷೇಪ ಆಗುತ್ತಿದೆ. ಹಾಗಾಗಿ ನಿಮ್ಮ ಕಡೆಯಿಂದ ಕ್ಲಿಯರ್ ಅಸ್ಯೂರೆನ್ಸ್ ಬೇಕು. ಪೋಲೀಸ್ ವಿಲ್ ಹ್ಯಾವ್ ಫ್ರೀ ಹ್ಯಾಂಡ್ ಕಾಯಿದೆಗೆ ವಿರುದ್ಧ ಯಾರು ಹೋಗಿದ್ದಾರೆ, ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ನೀವು ನಿಷ್ಠುರವಾಗಿ ಹೇಳಬೇಕಾಗುತ್ತದೆ. ಇನ್ನು ಕಾಂಪನ್‌ಸೇಷನ್ ಬಗ್ಗೆ ತಾವು ಹೇಳಿದ್ದೀರಿ. ನಾನು ಬಟ್ಕಾಳ್ ಡಿಸಿ ಹತ್ತಿರ ಮಾತನಾಡಿದೆ. ಒಂದೂವರೆ ಸಾವಿರ ರೂಪಾಯಿ ಕಾಂಪನ್‌ಸೇಷನ್ ಕೊಟ್ಟಿದ್ದಾರೆ. ಮಂಗಳೂರು ಹಾಸ್ಪಿಟಲ್‌ನಲ್ಲಿ, ಮಣಿಪಾಲ್ ಹಾಸ್ಪಿಟಲ್‌ನಲ್ಲಿ, ಇಬ್ಬರು ಸೀರಿಯಸ್ ಪೇಷಂಟ್ಸ್ ಇದ್ದಾರೆ. ಇನ್ನು ಬಾಕಿಯವರು ಗಾಯಗೊಂಡವರಿದ್ದಾರೆ. ಅವರನ್ನು ಕೆ.ಎಂ.ಸಿಗೆ ಮೂವ್ ಮಾಡಿದ್ದಾರೆ.

ಯಾರಿಗೆ ಹೆಚ್ಚಿನ ಆಸ್ತಿ ನಷ್ಟವಾಗಿದೆ ಅವರಿಗೆ ನಿಮ್ಮ ಕಡೆಯಿಂದ ಪಂಚನಾಮೆ ಆಗಲಿಲ್ಲ. ಯಾವ ಪರಿಹಾರವನ್ನು ಕೊಡಲಿಲ್ಲ. ನಾನು ಸಹ ಅಲ್ಲಿಗೆ ಹೋಗಬೇಕಾಗಿತ್ತು. ಆದರೆ ನಿಮ್ಮ ಅಧಿಕಾರಿಗಳು ಅಲ್ಲಿಗೆ ಯಾರೂ ಹೋಗುತ್ತಿಲ್ಲ,ಯಾರೂ ಬರಬಾರದು ಎಂದು ಹೇಳಿದ್ದೀವೆ, ಆದ್ದರಿಂದ ನೀವೂ ಹೋಗಬೇಡಿ ಎಂದು ಹೇಳಿದರು. ಹಾಗಾಗಿ ಐ ಟೂ ಸ್ಕಾಪ್. ಮತ್ತೆ ನಾನು 10ನೇ ತಾರೀಖು ಹೋಗುತ್ತಿದ್ದೇನೆ. ಈಗ ಡಿ.ಐ.ಜಿಯವರು ಮಾತನಾಡಿದರು. ನಿಮಗೆ ನಾನು ಹೇಳುತ್ತಿದ್ದೇನೆ, ಪ್ಲೀಸ್ ಗೀವ್ ಫ್ರೀ ಹ್ಯಾಂಡ್ ಟು ದಿ ಪೋಲೀಸ್. ಅಲ್ಲಿ ಕಲ್‌ಪ್ರಿಟ್ಸ್ ಯಾರೇ ಇರಲಿ ಯಾವ ವರ್ಗದವರೇ ಇರಲಿ, ಯಾವ ಸಮಾಜದವರೇ ಇರಲಿ, ಯಾವ ಜಾತಿಯವರೇ ಇರಲಿ, ಅವರ ಮೇಲೆ ಸರಿಯಾಗಿ ನಿಷ್ಕೂರವಾದ ಕ್ರಮವನ್ನು ಅವರ ವಿರುದ್ಧ ನೀವು ತೆಗೆದುಕೊಳ್ಳಬೇಕಾಗುತ್ತದೆ. ಅಡ್ವಕೇಟ್ ಕಾಂಪನ್‌ಸೇಷನ್ ಕೊಡಬೇಕಾಗುತ್ತದೆ ಯಾರ ಆಸ್ತಿ ಪಾಸ್ತಿ ನಷ್ಟ ಆಗಿದೆ ಅದಕ್ಕೆ ಇನ್ನೂ ಪಂಚನಾಮೆ ಆಗಿಲ್ಲ. ಅದು ಆಗುವ ವ್ಯವಸ್ಥೆ ಸರ್ಕಾರದಿಂದ ಆಗಬೇಕಾಗುತ್ತದೆ.

ಶ್ರೀ ಆರ್.ಎನ್.ನಾಯ್ಕ : ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮುಖ್ಯಮಂತ್ರಿಯವರು ಅಲ್ಲಿನ ವರದಿಯನ್ನು ಇಲ್ಲಿ ಹೇಳಿದ್ದಾರೆ. ನಾನು ಸ್ವತಃ ಅಲ್ಲಿ 2 ದಿವಸ ಇದ್ದು ನೋಡಿದ್ದೇನೆ; ಪೋಲೀಸ್ ಇಲಾಖೆ ಅದರಲ್ಲೂ ಎಸ್‌ಪಿ ಮತ್ತು ಡಿಐಜಿಯವರು ಅಲ್ಲಿ ಇದು ಗಲಭೆಯನ್ನು ಹತೋಟಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದನ್ನು ಒಪ್ಪಲೇಬೇಕಾಗುತ್ತದೆ. ಆದರೆ ವಿಷಯ ಹೀಗಾಗಿದೆ, ನಾನು ಸುಮಾರು 10 ವರ್ಷದ ನನ್ನ ಅನುಭವದ ಮೇಲೆ ಹೇಳುತ್ತೇನೆ. ಸುಮಾರು ಇದು ನಾಲ್ಕು ಸಲ ಈ ತರಹ ಗಲಭೆ ಆದಾಗಲೂ ಸಹ, ಅಲ್ಲಿ ಆರೋಪಿಗಳು ಏನು ಗಲಭೆ ಮಾಡುತ್ತಾರೋ, ಅವರು ಸರಿಯಾಗಿ ಸಿಗುವುದಿಲ್ಲ. ಪೋಲೀಸ್ ಅಥವಾ ಸರ್ಕಾರ ಅಲ್ಲಿ ಮಾಡಿರುವುದೇನೆಂದರೆ ಒಂದು ಸ್ವಲ್ಪ ದಿನ 4 ಜನ ಹಿಂದೂಗಳನ್ನು ಕರೆಯುವುದು, 4 ಜನ ಮುಸ್ಲಿಂ ಭಾಂದವರನ್ನು ಕರೆಯುವುದು, ಇನ್ನು ಮುಂದೆ ನೀವು ಗದ್ದಲ ಮಾಡಬೇಡಿ ಎಂದು ಹೇಳಿ ಹಾಗೆಯೇ ಅದನ್ನು ಪ್ಯಾಚಪ್ ಮಾಡಿ ನೀವು ಅವರನ್ನು ಬಿಟ್ಟುಬಿಡಿ ಇವರನ್ನು ಬಿಟ್ಟುಬಿಡಿ ಎಂದು ಹೇಳಿ ಮತ್ತೆ ಹಾಗೆ ಅವರನ್ನೆಲ್ಲಾ ಕಳುಹಿಸಿಕೊಡುವುದು. ಹೀಗಾಗಿ ಇದು ಏನಾಗಿದೆಯೆಂದರೆ ಒಳಗಡೆ ಗಾಯ ಹಾಗೆ ಇರುತ್ತದೆ ಆದರೆ ಮೇಲುಗಡೆ ತೇಪೆ ಹಚ್ಚಿದ ಹಾಗೆ ಆಗಿರುತ್ತದೆ. ಇನ್ನೊಂದು ಸಂಶಯ ಅಲ್ಲಿ ಇದೆ. ಆ ಬಗ್ಗೆ ವರದಿ ಇಲ್ಲಿ ಬರಲಿಲ್ಲ. ಅಲ್ಲಿ ನಾಡ ಬಾಂಬ್ ಉಪಯೋಗ ಮಾಡಿದ್ದಾರೆ. ನಾನು ಅಲ್ಲಿ ಸ್ಕೋಟಕ ವಸ್ತುಗಳನ್ನು ನೋಡುವ ಪ್ರಕಾರ ನನಗೆ ಏನೂ ಮಾಹಿತಿ ಇಲ್ಲ; ಪೋಲೀಸರು ಹೇಳಿದ ಪ್ರಕಾರ ಹಣವು ಅಲ್ಲಿ ನಾಡಬಾಂಬ್ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಇನ್ನೂ ಬೇರೆ ಏನೂ ಉಪಯೋಗ ಮಾಡುವುದಿಲ್ಲ ಎನ್ನುವ ಭರವಸೆ ಇಲ್ಲ. ಅಲ್ಲಿ ಏನು ಮಾಡಬೇಕೆಂದರೆ ಪೋಲೀಸರು ಕೆಲವು ಮನೆಗಳನ್ನು ಸರ್ಚ್ ಮಾಡಬೇಕಾಗುತ್ತದೆ. ಸರ್ಚ್ ಮಾಡಿ ಪತ್ತೆ ಹಚ್ಚಬೇಕಾಗುತ್ತದೆ. ಅಲ್ಲಿ ಪದೇ ಪದೇ ಲೈಸೆನ್ಸ್ ಕೊಡಬೇಡಿ; ರಿವಾಲ್ವರ್ ಕೊಡಬೇಡಿ, ಅದರಿಂದ ತೊಂದರೆಯಾಗುತ್ತದೆ ಎಂದು ಹೇಳಿದ್ದೇನೆ. ಬಹುಶಃ ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವ ಏರಿಯಾದಲ್ಲಿ ಇರುವುದಕ್ಕಿಂತ ಭಟ್ಕಾಳದಲ್ಲಿ ರಿವಾಲ್ವರ್ ಲೈಸನ್ಸ್ ಬಹಳ

ಇವೆ. ಅದನ್ನು ತಾವು ಪತ್ತೆ ಹಚ್ಚಬೇಕು. ನಾನು ಸರ್ಕಾರಕ್ಕೆ ಇದರ ಬಗ್ಗೆ 2-3 ಸಲ ಪತ್ರ ಬರೆದೆ. ಆದರೆ ನನಗೆ ಏನೂ ಉತ್ತರ ಬಂದಿಲ್ಲ. ನಾನು ಮಾನ್ಯ ಮೊಯಿಲಿಯವರ ಸರ್ಕಾರ ಬಂದಮೇಲೆ ಬರೆದಿಲ್ಲ. ಈ ಹಿಂದೆ 2 ಸಲ ಬರೆದಿದ್ದೇನೆ. ಅದು ಬರೆದು ಕೂಡ ಏನೂ ಪ್ರಯೋಜನವಿಲ್ಲ ಎಂದು ನಾನು ಸುಮ್ಮನೆ ಕುಳಿತಿದ್ದೇನೆ. ಈಗ ಅಲ್ಲಿ ಏನಾಗಿದೆ ಎಂದರೆ ಭಯದ ವಾತಾವರಣ, ನಿರ್ಮಾಣವಾಗಿ ಇವರನ್ನು ಕಂಡರೆ ಅವರಿಗೆ ಭಯ, ಅವರನ್ನು ಕಂಡರೆ ಇವರಿಗೆ ಭಯ. ಇದು ಹೋಗಬೇಕಾಗುತ್ತದೆ. ಅದು ಹೋಗುವುದಕ್ಕೆ ಈ ಸಲವಾದರೂ ಕನಿಷ್ಟ ನನ್ನ ಅಂದಾಜಿನ ಪ್ರಕಾರ 7-8 ಗಲಭೆಗಳು ಆದ ಪ್ರಕರಣದಲ್ಲಿ ಸುಮಾರು 500-600 ಕಲ್‌ಪ್ರಿಟ್ಸ್ ಇದ್ದಾರೆ. ಆದರೆ ನೀವು 30 ಜನರನ್ನು ಹಿಡಿದಿದ್ದೇವೆ ಎಂದು ಹೇಳುತ್ತೀರಿ. ಜಿಪಿ ನಾಯಕ್‌ರವರು ಬಿಜೆಪಿ ಅಧ್ಯಕ್ಷರು. ಅವರ ಮನೆ ಹತ್ತಿರ ಸುಮಾರು 60 ಜನ ಹೋಗಿದ್ದಾರೆ. ಅವರೆಲ್ಲಾ ಅವರ ಸುತ್ತಮುತ್ತಲಿನವರೇ; ಬೇರೆ ಯಾರೂ ಸಹ ಬಂದಿಲ್ಲ. ಅಷ್ಟೇ ಅಲ್ಲ, ಅವನ ಹೆಂಡತಿ ಸುಮಾರು 15-20 ಜನರನ್ನು ಗುರುತು ಮಾಡಿದ್ದಾರೆ. ಈಗ ಇದು ಏನಾಗಿದೆ ಎಂದರೆ ಅಲ್ಲಿಯ ಜನರಿಗೆ ಇದರ ಬಗ್ಗೆ ಒಂದು ಸಂಶಯ ಬಂದಿದೆ ಮತ್ತು ಆರೋಪಿಗಳು ಯಾವುದೋ ಕೈ ಆಡಿಸಿ ತಪ್ಪಿಸಿಕೊಂಡು ಹೋಗುತ್ತಿದ್ದಾರೆಂದು ಸಂಶಯ ಬಂದಿದೆ. ಪೋಲೀಸ್‌ನವರು ಇವೊತ್ತು ಯಾವುದೇ ಮನೆಗಳನ್ನು ಚೆಕ್ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಕೆಲವು ಮನೆಗಳನ್ನು ಚೆಕ್ ಮಾಡದೇ ಹೋದರೆ ಇವತ್ತಲ್ಲ ನಾಳೆ ಮತ್ತೇ ಅಲ್ಲಿ ಏನಾದರೂ ಒಂದು ಬಾಂಬ್ ಸ್ಫೋಟನೋ ಅಥವಾ ಇನ್ನೇನಾದರೂ ದೊಡ್ಡ ಗಲಭೆನೋ ಅಥವಾ ಗುಂಡು ಹಾಕುವಂತಹ ಒಂದು ಘಟನೆ ಆಗಿಹೋಗುತ್ತದೆ. ಎಲ್ಲಾ ಪರಿಶೋಧನೆ ಮಾಡಿ, ಸರ್ಕಾರದವರು ಅಲ್ಲಿ ಏನೂ ತೊಂದರೆ ಇಲ್ಲ ಎನ್ನುವುದನ್ನು ಖಾತ್ರಿಪಡಿಸುವುದಕ್ಕೆ ಏನೇನು ಪ್ರಯತ್ನ ಇದೆ ಅದನ್ನು ದಯಮಾಡಿ ಮಾಡಿ. ನೀವು ಈಗಲೇ ಮಾಡಲಿಲ್ಲ ಎಂದರೆ ಹಿಂದೆ ಆದ ಗಲಭೆಗಳ ಜೊತೆಗೆ ಇದು ಸೇರಿ ಹೋಗಿಬಿಡುತ್ತದೆ. ಆದುದರಿಂದ ತಾವೇ ಸ್ವತಃ ನಿಮ್ಮ ಇಂಟಲಿಜೆಂಟ್ಸ್‌ರವರನ್ನು ಅಥವಾ ಇದರಲ್ಲಿ ಎಸ್‌ಪಿ ಅಥವಾ ಡಿಐಜಿಯವರನ್ನು ಕರೆಸಿಕೊಂಡು ಅಥವಾ ಫೋನ್‌ನಲ್ಲಿ ನೀವೇ ಸೀಕ್ರೆಟ್ ಆಗಿ ಮಾತನಾಡಿ ಮತ್ತು ಈ ವಿಷಯದಲ್ಲಿ ನಮ್ಮನ್ನು ನಿಮ್ಮನ್ನು ಯಾರನ್ನೂ ನಂಬಬೇಡಿ. ನೀವು ಇದರಲ್ಲಿ ನನ್ನನ್ನೂ ನಂಬಬೇಡಿ. ಆದರೂ ನಾನು ನಿಮಗೆ ಎಕ್ಸ್‌ಪ್ಲೈನ್ ಮಾಡುತ್ತೇನೆ. ನಾನು ಒಬ್ಬರೇ ಒಬ್ಬರನ್ನು ಪೋಲೀಸರು ಹಿಡಿದವರನ್ನು ಬಿಡಿ ಎಂದು ಹೇಳಲಿಲ್ಲ. ದೇವರಾಣೆ ಮಾಡಿ ಹೇಳುತ್ತೇನೆ. ಆದರೆ ಬೇರೆ ಹೇಳಿದವರು ಇದ್ದಾರೆ. ನಾನು ಹೆಸರು ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಅದಕ್ಕಾಗಿ ನೀವು ಯಾರನ್ನೂ ನಂಬಬೇಡಿ. ನನ್ನನ್ನೂ ಸಹ ನಂಬಬೇಡಿ. ದಯಮಾಡಿ ನೀವು ಮನಸ್ಸು ಮಾಡಿ ಅವರ ಹತ್ತಿರ ಮಾತನಾಡಿ ಖಾತ್ರಿಪಡಿಸಿಕೊಳ್ಳಿ. ಏನು ನಡೆದಿದೆ ಎಂದು ನೋಡಿ. ನೀವು ಈ ರೀತಿ ಮಾಡದಿದ್ದರೆ ಭಟ್ಕಳ್ ಒಂದು ದಿವಸ ಉರಿಯುತ್ತದೆ. ಇಷ್ಟೇ ನನ್ನ ವಾದ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ನಾವು ಸನ್ಮಾನ್ಯ ಎ.ಜಿ. ಆನಂದನ್ ಅಡಿಷನಲ್ ಡಿ.ಜಿ.ಪಿ ಅವರನ್ನು ಅಲ್ಲಿಗೆ ಕಳುಹಿಸಿದ್ದೇವೆ. ಈ ಘಟನೆ ನಡೆದ ಮರುದಿವಸವೇ ಅವರು ಅಲ್ಲಿಗೆ ಹೋಗಿದ್ದಾರೆ. ಹೋಗಿ

ಇವತ್ತು ಅವರು ಸಂಜೆ ಬರುತ್ತಿದ್ದಾರೆ. ನಾವು ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಇಂಥ ಗಲಭೆ ಇನ್ನು ಮುಂದೆ ಆಗಬಾರದು; ಆ ರೀತಿ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಯಾವುದೇ ರೀತಿಯಲ್ಲಿ ನಾವು ಹಸ್ತ ಕ್ಷೇಪ ಮಾಡುವಂಥ ಪ್ರಶ್ನೆಯೇ ಬರುವುದಿಲ್ಲ. Police will have a free hand provided they bring back normaly there. ಈ ಬಗ್ಗೆ ತಾವು ಕೊಟ್ಟಂಥ ಸಲಹೆಗಳು ಮತ್ತು ಸನ್ಮಾನ್ಯ ಆರ್.ಎಸ್.ನಾಯಕರು ಕೊಟ್ಟಂಥ ಸಲಹೆಗಳನ್ನೆಲ್ಲ ಗಮನಿಸಿ ನಾವು ಪರಿಸ್ಥಿತಿಯನ್ನು ಹತೋಟಿಗೆ ತರುವುದಕ್ಕೆ ಮುಂದೆ ಯಾವುದೇ ರೀತಿಯಿಂದ ಈ ಗಾಯ ಅಲ್ಲಿ ಉಳಿಯದ ರೀತಿಯಲ್ಲಿ ನಾವು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ವಿ. ದೇಶಪಾಂಡೆ : ಪರಿಹಾರ ಕೊಡುವ ಬಗ್ಗೆ ಹೇಳಲಿಲ್ಲ.

ಶ್ರೀ ಆರ್. ಎನ್. ನಾಯಕ್ : ಅವರು ರಾಜಾರೋಷವಾಗಿ ತಿರುಗಾಡುತ್ತಾರೆ. ಅದು ಎಲ್ಲರಿಗೂ ಗೊತ್ತಿದೆ. ಅವರನ್ನು ಹಿಡಿಯದಿರುವುದನ್ನು ನೋಡಿದರೆ ತನಗೆ ತಾನೇ ಗೊತಾಗುತ್ತದೆ. ಯಾರೋ ಕೈ ಆಡಿಸಿದ್ದಾರೆ, ಅವರನ್ನು ಬಿಟ್ಟಿದ್ದಾರೆ, ಹಿಡಿಯಲಿಲ್ಲ ಎಂದು. ಆದ್ದರಿಂದ ನಾನು ಹೇಳುವುದು ಏನೆಂದರೆ, ಇಲ್ಲಿ ಔಟ್‌ಸೈಡ್ ಪೋಲೀಸ್‌ನವರಿಗೆ ಅಷ್ಟು ಗೊತ್ತಾಗುವುದಿಲ್ಲ; ಅವರು ಎಷ್ಟೇ ದೊಡ್ಡ ಆಫೀಸರ್ ಇರಲಿ, ಅಲ್ಲಿ ಲೋಕಲ್ ಪೋಲೀಸ್, ಎಸ್.ಪಿ ಮತ್ತು ಹತ್ತಿರ ತಾವೇ ಮಾತನಾಡಿ. ಅವರಿಗೆ ಒಂದು ನಂಬಿಕೆಯನ್ನು ಹುಟ್ಟಿಸಿ. ಆ ನಂಬಿಕೆ ಹುಟ್ಟಿಸಿದಾಗಲೇ ಅದು ಏನಾದರೂ ಆಗುತ್ತದೆಯೇ ಹೊರತು ಇಲ್ಲದಿದ್ದರೆ ಏನೂ ಆಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗಾಗಲೇ ಸುಮಾರು ಈ ಪ್ರಾಪರ್ಟಿ ಎಲ್ಲೆಲ್ಲಿ ನಷ್ಟವಾಗಿದೆ, ಅಲ್ಲೆಲ್ಲಾ ಸುಮಾರು ಹತ್ತು ಸಾವಿರದ ಹದಿನೈದು ಸಾವಿರ ರೂಪಾಯಿಗಳವರೆಗೆ ಅಲ್ಲಿ ಪರಿಹಾರ ಕೊಟ್ಟಿದ್ದಾರೆ. ನಮ್ಮ ರಾಣೆಯವರೇ ಡಿಸ್ಟ್ರಿಬ್ಯೂಟ್ ಮಾಡಿಕೊಂಡು ಬಂದಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ : ಕೊಟ್ಟಿಲ್ಲ. ಪಂಚನಾಮೆ ಮಾಡಿದ್ದಾರೆ.

ಶ್ರೀ ಪ್ರಭಾಕರ್ ಎಸ್. ರಾಣೆ (ವಯಸ್ಕರ ಶಿಕ್ಷಣ ರಾಜ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಪಂಚನಾಮೆ ಮಾಡಿದ್ದಾರೆ, ಪರಿಹಾರವನ್ನು ಕೊಟ್ಟಿದ್ದಾರೆ. ನಾನೇ ಅಲ್ಲಿ ಕೊಟ್ಟು ಬಂದಿದ್ದೇನೆ.

ವಿಷಯಃ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಅನುಷ್ಠಾನಕ್ಕೆ ತರುವ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಆಗಲಿ, ಅದು ಎಲ್ಲೆಲ್ಲಿ ಸರಿಯಾಗಲಿಲ್ಲ ಅದನ್ನು ಸರಿ ಮಾಡೋಣ. ಈಗ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಅನುಷ್ಠಾನಕ್ಕೆ ತರುವ ಬಗ್ಗೆ ಹಾಕಿಕೊಂಡಿರುವ ಕಾರ್ಯಕ್ರಮಗಳ ವಿವರವನ್ನು ನೀಡುತ್ತೇನೆ.

1) 1ನೇ ಏಪ್ರಿಲ್ 1993ರಿಂದ ಹೊರಡಿಸಲಾಗುವ ಎಲ್ಲಾ ಆದೇಶ, ಸುತ್ತೋಲೆ, ಅಧಿಸೂಚನೆ, ಅಧಿಕೃತ ಜ್ಞಾಪನ - ಇತ್ಯಾದಿಗಳು ಕನ್ನಡದಲ್ಲೇ ಇರತಕ್ಕದ್ದು ಎಂದೂ ದಿನಾಂಕ 1ನೇ ಜೂನ್ 1993ರಿಂದ ಎಲ್ಲಾ ಅಧಿಕಾರಿಗಳು, ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಸೇರಿ, ನೌಕರರು ಕಡತಗಳನ್ನು ಕನ್ನಡದಲ್ಲೇ ನಿರ್ವಹಿಸತಕ್ಕದ್ದು ಹಾಗೂ ಕಡತದಲ್ಲಿನ ಟಿಪ್ಪಣಿಗಳು ಕನ್ನಡದಲ್ಲೇ ಇರತಕ್ಕದ್ದು ಎಂದು ಮುಖ್ಯ ಕಾರ್ಯದರ್ಶಿಗಳು ಅಧಿಕೃತ ಜ್ಞಾಪನ ಹೊರಡಿಸಿರುತ್ತಾರೆ.

2) ಕಛೇರಿಗಳಲ್ಲಿರುವ ಆಂಗ್ಲ ಭಾಷಾ ಬೆರಳಚ್ಚು ಯಂತ್ರಗಳನ್ನು ವಾಪಸ್ ಪಡೆದು ಬದಲಿಗೆ ಕನ್ನಡ ಬೆರಳಚ್ಚು ಯಂತ್ರಗಳನ್ನು ಸರಬರಾಜು ಮಾಡುವ ದೃಷ್ಟಿಯಿಂದ 250 ಕನ್ನಡ ಬೆರಳಚ್ಚು ಯಂತ್ರಗಳನ್ನು ತುರ್ತಾಗಿ ಖರೀದಿಸಲು ಕ್ರಮ ಕೈಗೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಬರೀ 250.

ಶ್ರೀ ಎಂ. ವೀರಪ್ಪ ಮೊಯಿಲಿ : ಬೇಕಾದರೆ ಜಾಸ್ತಿ ಮಾಡೋಣ. ಈ ಸಧ್ಯಕ್ಕೆ 250.

ಶ್ರೀ ವಾಟಾಳ್ ನಾಗರಾಜ್ : ಇಂಗ್ಲೀಷ್ ಬೆರಳಚ್ಚು ಯಂತ್ರಗಳು 250 ಇವೆ.

ಶ್ರೀ ಎಂ. ವೀರಪ್ಪಮೊಯಿಲಿ : ಆಯಿತು.

3) ಅಖಿಲ ಭಾರತ ಸೇವೆಗೆ ಸಂಬಂಧಿಸಿದ ರಾಜ್ಯಸರ್ಕಾರದ ಅಧಿಕಾರಿಗಳಿಗೆ ಆಡಳಿತದಲ್ಲಿ ಕನ್ನಡದ ಬಳಕೆ ಬಗ್ಗೆ ಯಾವ ಪ್ರಕಾರ ತರಬೇತಿ ಏರ್ಪಡಿಸಬೇಕೆಂಬ ಬಗ್ಗೆ ತೀರ್ಮಾನಿಸಲಾಗಿದೆ. ಈ ಬಗ್ಗೆ ತರಬೇತಿ ಕಾರ್ಯಕ್ರಮಕ್ಕೆ ಅನುಕೂಲವಾಗುವಂತೆ ಪಠ್ಯಕ್ರಮವನ್ನು ತಯಾರಿಸಲು ಕ್ರಮ ಕೈಗೊಂಡಿದ್ದೇವೆ.

4) ಡಾ॥ ಸರೋಜಿನಿ ಮಹಿಷಿ ವರದಿ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಕಾರ್ಯವಿಧಾನಗಳನ್ನು ರೂಪಾಸಲು ಸಂಪುಟದ ಉಪಸಮಿತಿಯನ್ನು ರಚಿಸಲಾಗಿದೆ. ಈ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವ ದೃಷ್ಟಿಯಿಂದ ಸತತವಾಗಿ ತನಿಖೆ ಕೈಗೊಳ್ಳಲು ಮತ್ತು ಉಪಸಮಿತಿಗೆ ವರದಿ ಮಾಡಲು ಪ್ರತಿ ಇಲಾಖೆಗಳಲ್ಲಿ ಅಧಿಕಾರಿಗಳ ಮತ್ತು ನೌಕರರನ್ನೊಳಗೊಂಡ ತನಿಖಾ ತಂಡವನ್ನು ರಚಿಸಲಾಗಿದೆ.

5) 1ನೇ ಏಪ್ರಿಲ್ 1993ರಿಂದ ಒಂದು ವರ್ಷದವರೆಗೆ ''ಕನ್ನಡ ಜಾಗೃತಿ ವರ್ಷ'' ಎಂದು ಆಚರಿಸಲಾಗುವುದು. ಈ ಸಂದರ್ಭದಲ್ಲಿ ಆಡಳಿತ ಭಾಷೆ, ಕನ್ನಡ, ಸಾಹಿತ್ಯ, ಸಂಸ್ಕೃತಿ ಇತ್ಯಾಂದಿ ವಿಷಯಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಲಾಗುವುದು. ಕನ್ನಡದ ಸರ್ವತೋಮುಖ ಅಭಿವೃದ್ಧಿಗೆ ಈ ಜಾಗೃತಿ ವರ್ಷವೂ ಹೆಚ್ಚು ಉಪಯುಕ್ತವಾಗುವುದು.